₹ 5 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಗುರುವಾರ 14.01.2021 ಸಂಪುಟ: 6 ಸಂಚಿಕೆ: 18 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ




ಮಕರ
ಸಂಕ್ರಾಂತಿಯ
ಶುಭಾಶಯಗಳು



# ಮಹಾ ಪುಸ್ತಕಾಭಿಷೇಕ ಆರಂಭ !

ದೇಶ ಸುತ್ತು, ಕೋಶ ಓದು ಅಂತೀವಿ. ಒಂಥರದಲ್ಲಿ ದಿನಪತ್ರಿಕೆಗಳು ದೇಶ-ಕೋಶ ಎರಡರ ಸಂಗಮ. ಆ ಲೆಕ್ಕದಲ್ಲಿ ನಮ್ಮದಂತೂ 'ವಿಶ್ವ'ಕೋಶ!

ಪತ್ರಿಕೆಯೊಂದು ಹೊತ್ತು ಹೊತ್ತಿಗೆ ಸುದ್ದಿ ಕೊಟ್ಟರೆ ಸಾಲದು, ಕೆಲವನ್ನಾದರೂ ಹೊತ್ತಗೆ ರೂಪದಲ್ಲೂ ಕೊಡಬೇಕು. ಅಂಥದ್ದೊಂದು ನಂಬಿಕೆಯೊಂದಿಗೆ ವಿಶ್ವವಾಣಿಯು ತನ್ನ ಆರನೇ ಹುಟ್ಟುಹಬ್ಬದ ಈ ಹೊತ್ತಿನಲ್ಲಿ ಪುಸ್ತಕ ಪ್ರಕಾಶನ ವಿಭಾಗವನ್ನು ಆರಂಭಿಸುತ್ತಿದೆ. ಅದರ ಹೆಸರು 'ವಿಶ್ವವಾಣಿ ಪುಸ್ತಕ'.

ಮೇಲೆ ಕಾಣುತ್ತಿರುವುದು 'ವಿಶ್ವವಾಣಿ ಪುಸ್ತಕ'ದ ಲಾಂಛನ. ಪುಸ್ತಕವೊಂದಕ್ಕೆ ಬಣ್ಣದ ರೆಕ್ಕೆಗಳು ಮೂಡುತ್ತಾ ಆಕರ್ಷಕ ಚಿಟ್ಟೆಯಾಗಿ ಫಡಫಡಿಸುತ್ತಿರುವ ಈ ಬಿಂಬ ಸೂಚಿಸುತ್ತಿರುವುದು ಇಷ್ಟನ್ನೇ: ಪುಸ್ತಕ ಓದದ ಮನುಷ್ಯ ಕಂಬಳಿ ಹುಳುವಿನಂತೆ. ಕೋಶಾವಸ್ಥೆಯಿಂದ ಹೊರಬಂದು ಕಂಬಳಿಹುಳು ಬಣ್ಣದ ಚಿಟ್ಟೆಯಾಗಬೇಕೆಂದರೆ ಅದರ ಭಾವ'ಕೋಶ'ವೂ ದೊಡ್ಡದಾಗಬೇಕು. ಅದಕ್ಕೆ ರಾಶಿ ರಾಶಿ ಓದಬೇಕು ಅನ್ನುವುದು ನಿಮಗೆ ಗೊತ್ತೇ ಇದೆ.

'ವಿಶ್ವವಾಣಿ ಪುಸ್ತಕ'ದ ಮೂಲಕ ವಿಶ್ವವಾಣಿಯಲ್ಲಿ ಪ್ರಕಟವಾದ ಬರಹಗಳನ್ನಷ್ಟೇ ಅಲ್ಲದೆ ಹೊರಗಿನ ಲೇಖಕರು ಬರೆದ ಆಯ್ದ ಕೃತಿಗಳನ್ನೂ ನಿಮ್ಮ ಕೈಗಿಡಲು ನಾವು ಉತ್ಸುಕರಾಗಿದ್ದೇವೆ.

ಹಾಗಾದರೆ ಬನ್ನಿ, ನಮ್ಮ ಈ 'ಕಾಗದದ ದೋಣಿ'ಯಲ್ಲಿ ನೀವೂ ಸಹಪಯಣಿಗರಾಗಿ.

ಅಂದ ಹಾಗೆ ಇದು, ಅಕ್ಷರ ಪ್ರೇಮಿಗಳಿಗೆ ನಮ್ಮ ಆರನೇ ವರ್ಷದ ಕೊಡುಗೆ!

ವಿಶ್ವವಾಣಿ